# ಸ್ವಾಮಿ ವಿವೇಕಾನಂದರ ಮಾತೃಪ್ರೇಮ

◆ ಕುಮಾರಿ ಉಷಾ

ತಾರಾ ಉಜ್ಜ್ವಲ ಪಶಿಲೊ ಧರಾಪರ
ನಿರ್ಮಲ ಗಗನ ವಿಕಾಶೀ ।
ರತ್ನಗರ್ಭಾ ನಾರೀ ರತ್ನ ಪ್ರಸವಿಲೋ
ಬಿಭೋರ ಬಾಲ ಸಂನ್ಯಾಸೀ ॥

ಶ್ರೀರಾಮಕೃಷ್ಣ-ಸ್ವಾಮಿ ವಿವೇಕಾನಂದರ ಭಕ್ತವೃಂದಕ್ಕೆ ಸುಪರಿಚಿತವಾದ ಈ ಬಂಗಾಳಿ ಗೀತೆಯನ್ನು ರಚಿಸಿದ ಗಿರೀಶಚಂದ್ರ ಘೋಷರು ಧ್ಯಾನದಲ್ಲಿ ಆಸಕ್ತಿಯುಳ್ಳವನೂ ಬಾಲ್ಯದಿಂದಲೇ ಸಂನ್ಯಾಸದಲ್ಲಿ ಒಲವನ್ನು ತೋರಿದವನೂ ಆದ ನರೇಂದ್ರನು ಸಪ್ತರ್ಷಿ ಮಂಡಲದಿಂದ ಧರೆಗಿಳಿದು ಬಂದ ಉಜ್ವಲ ತಾರೆಯೆಂದೇ ಸ್ತುತಿಸುತ್ತ ಅಂತಹ ತೇಜೋರಾಶಿಯನ್ನು ತನ್ನ ಉದರದಲ್ಲಿ ಹೊತ್ತ ಭುವನೇಶ್ವರೀ ದೇವಿಯವರನ್ನು 'ರತ್ನಗರ್ಭಾ' ಎಂದು ಸ್ತುತಿಸಿದ್ದಾರೆ.

ಸ್ವಾಮಿ ವಿವೇಕಾನಂದರು ತಮ್ಮ ಇಪ್ಪತ್ತನಾಲ್ಕನೆಯ ವಯಸ್ಸಿನಲ್ಲೆ ಸಂನ್ಯಾಸ ದೀಕ್ಷೆಯನ್ನು ಪಡೆದು ಕಾಮ-ಕಾಂಚನವೆಂಬ ಪ್ರಾಪಂಚಿಕ ಸುಖಭೋಗಗಳನ್ನು ತ್ಯಜಿಸಿ, ಸಂಸಾರ ಬಂಧನದಿಂದ ಮುಕ್ತರಾಗಿದ್ದರೂ ತಮ್ಮ ತಾಯಿ ಭುವನೇಶ್ವರಿ ದೇವಿಯವರನ್ನು ಮನದಿಂದ ತಳ್ಳಿಹಾಕಲು ಸಮರ್ಥರಾಗಿರಲೂ ಇಲ್ಲ, ತಯಾರಾಗಿರಲೂ ಇಲ್ಲ. ಸಂನ್ಯಾಸವೆಂದರೆ ಮೃತ್ಯುವನ್ನು ಪ್ರೀತಿಸುವುದು ಎಂದರ್ಥ. ಇದು ಆತ್ಮಹತ್ಯೆ ಅಲ್ಲ. ಮರಣವು ಅನಿವಾರ್ಯವೆಂದು ತಿಳಿದು, ಸರ್ವತೋಭಾವದಿಂದ ತನ್ನನ್ನೇ ಸಂಪೂರ್ಣವಾಗಿ ಇತರರ ಹಿತಕ್ಕಾಗಿ ನಿವೇದಿಸಿಕೊಳ್ಳುವುದು ಎಂಬ ವಿವರಣೆಯನ್ನು ನೀಡಿದ ವಿವೇಕಾನಂದರೇ ಹೆತ್ತ ತಾಯನ್ನು ನಿರ್ಲಕ್ಷ್ಯ ಮಾಡಿಯಾರೆ? ತಾಯಿಯನ್ನು ಪ್ರೀತಿಸದೆ, ಆಕೆಯನ್ನು ಪೂಜಿಸದೆ ಯಾರೊಬ್ಬನೂ ಮಹಾನ್ ವ್ಯಕ್ತಿಯಾಗಲಾರ, ಎಂದು ಅವರು ಖಚಿತವಾಗಿ ನುಡಿದಿದ್ದಾರೆ. ಸಂನ್ಯಾಸಿಯಾಗಿ ಯಾರೂ ಜನ್ಮತಾಳುವುದಿಲ್ಲ, ಗೃಹತ್ಯಾಗಕ್ಕೆ ಮೊದಲು ಸಂಸಾರದಲ್ಲೇ ಎಲ್ಲರೂ ಲಾಲಿತ ಪಾಲಿತರು. ಆದ್ದರಿಂದಲೇ ಸ್ವಾಮೀಜಿ ತಮ್ಮ ಹೆತ್ತ ತಾಯಿಯ ಋಣದಿಂದ ತಾವು ಮುಕ್ತರೆಂದು ಭಾವಿಸಲಿಲ್ಲ. ಆತ್ಮಶ್ರಾದ್ಧವನ್ನು ಮಾಡಿಕೊಂಡಿದ್ದರೂ ಕೂಡ ಮಾತೃಪ್ರೇಮವನ್ನು ಅಲ್ಲಗೆಳೆಯಲು ಅವರು ತಯಾರಿರಲಿಲ್ಲ. ಈ ನಿಟ್ಟಿನಲ್ಲಿ ಶ್ರೀಶಂಕರಾಚಾರ್ಯರ ಹಾಗೂ ಶ್ರೀಚೈತನ್ಯ ಮಹಾಪ್ರಭುಗಳ ಮನೋಧರ್ಮವೇ ಅವರದಾಗಿತ್ತು. ಮಾತ್ರವಲ್ಲ, ಮಹಾವೈರಾಗ್ಯ ಹೊಂದಿದ್ದರೂ ಸಂಸಾರದ ಬೇಗೆಯಲ್ಲಿ ಬೆಂದಿದ್ದ ತಾಯಿಗಾಗಿ ತ್ರಿಕರಣಪೂರ್ವಕವಾಗಿ ಶ್ರಮಿಸಿ, ತಾವು ತಮ್ಮ ತಾಯಿಗಾಗಿ



ಭುವನೇಶ್ವರೀ ದೇವಿ

ಏನನ್ನೂ ಮಾಡಲಾಗದಿದ್ದುದಕ್ಕೆ, ಅವರ ಬಗ್ಗೆ ಯಾವ ಚಿಂತೆಯನ್ನೂ ಮಾಡದೆ ಇದ್ದುದಕ್ಕೆ ವಿಷಾದವನ್ನು ವ್ಯಕ್ತಪಡಿಸಿದರು.

ಮುಂದೆ ಸ್ವಾಮಿ ವಿವೇಕಾನಂದರೆಂದು ಜಗತ್ಪ್ರಸಿದ್ಧಿಯನ್ನು ಪಡೆದ ನರೇಂದ್ರನು ವಿಶ್ವನಾಥ ದತ್ತ-ಭುವನೇಶ್ವರೀ ದೇವಿಯ ಹತ್ತು ಮಕ್ಕಳಲ್ಲಿ ಆರನೆಯವನು. ದತ್ತ ದಂಪತಿಗಳ ಪ್ರಥಮ ಪುತ್ರನೂ, ದ್ವಿತೀಯ ಪುತ್ರಿಯೂ ಶೈಶವದಲ್ಲಿಯೇ ಮೃತರಾಗಿದ್ದರು. ಮೂರನೆಯ ಮಗಳು ಹಾರಾಮಣಿ ಇಪ್ಪತ್ತೆರಡು ವರ್ಷಗಳು ಜೀವಿಸಿದ್ದರೆ, ನಾಲ್ಕನೆಯವಳು ದೀರ್ಘಕಾಲ ಬದುಕಿದ್ದಳು. ಐದನೆಯ ಹೆಣ್ಣು ಮಗು ಸಹ ಕಡಮೆ ಆಯುಸ್ಸಿನವಳು. ಹೆತ್ತ ಮಕ್ಕಳನ್ನು ಕಳೆದುಕೊಂಡ ತಾಯಿಹೃದಯ ನೊಂದು ಸಾಂತ್ವನಕ್ಕಾಗಿ ಭಗವಂತನಲ್ಲಿ ಪ್ರಾರ್ಥಿಸತೊಡಗಿತು. ಈಗ ತನಗೊಂದು ಗಂಡು ಮಗು ಆಗಬೇಕೆಂದು ಹಂಬಲಿಸಿ ಭುವನೇಶ್ವರೀ ದೇವಿ ಕಾಶಿಯ ವೀರೇಶ್ವರ ಶಿವನಿಗೆ ಹರಕೆ ಹೊತ್ತು ದೀರ್ಘಕಾಲ ವ್ರತಗಳನ್ನು ಆಚರಿಸಿದಳು. ಅದರ ಫಲವಾಗಿ ಜನಿಸಿದ ಪುತ್ರನಿಗೆ ವೀರೇಶ್ವರನೆಂದು ನಾಮಕರಣ ಮಾಡಿ ನರೇಂದ್ರನಾಥನೆಂದು ಮತ್ತೊಂದು

ವಾರಾಣಸಿಯ ರಾಮಕೃಷ್ಣ ಸೇವಾಶ್ರಮದ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುವ ಕುಮಾರಿ ಉಷಾ ರಾಮಕೃಷ್ಣ ಆಶ್ರಮದ ಭಕ್ತರು. ಶುಶ್ರೂಷೆ, ಸೇವೆ ಮತ್ತು ಸಾಧನೆಯಲ್ಲಿ ತೊಡಗಿಸಿಕೊಂಡಿರುವವರು.

ಹೆಸರಿಟ್ಟರು. ವಾತ್ಸಲ್ಯದಿಂದ ತಂದೆ-ತಾಯಿಯರು 'ಬಿಲೆ' ಎಂದು ಕರೆಯುತ್ತಿದ್ದರು. ಬಿಲೆಗೆ ಕಿರಣಬಾಲಾ, ಯೋಗೀಂದ್ರಬಾಲಾ ಎಂಬ ತಂಗಿಯರೂ, ಮಹೇಂದ್ರನಾಥ, ಭೂಪೇಂದ್ರನಾಥ ಎಂಬ ತಮ್ಮಂದಿರೂ ಆದರು. ಅನಂತರದ ದಿನಗಳಲ್ಲಿ ಸ್ವಾಮಿ ವಿವೇಕಾನಂದರು ತಮ್ಮ ಅಸಾಮಾನ್ಯ ವ್ಯಕ್ತಿತ್ವಕ್ಕೆ ತಮ್ಮ ತಾಯಿ ತಮಗಾಗಿ ಮಾಡಿದ್ದ ತಪಸ್ಸೇ ಕಾರಣವೆಂದೂ, ತಮ್ಮ ಜನನಕ್ಕಾಗಿ ಆಕೆ ತಮ್ಮ ಶರೀರ, ಮನಸ್ಸು, ಆಚಾರ, ವಿಚಾರಗಳನ್ನು ಪವಿತ್ರವಾಗಿರಿಸಿ ಕೊಂಡಿದ್ದರಿಂದಲೆ ಆಕೆ ಪೂಜಾರ್ಹಳೆಂದೂ ತಮ್ಮ ಮಿತ್ರರಿಗೆ ಹೇಳುತ್ತಿದ್ದರು. ಬಾಲಕ ಬಿಲೆ ಬಲು ತುಂಟ. ಭುವನೇಶ್ವರಿಗೆ ಅವನನ್ನು ಸಂಭಾಳಿಸುವುದು ಸುಲಭಸಾಧ್ಯವೇನೂ ಆಗಿರಲಿಲ್ಲ. ಐಶ್ವರ್ಯವಂತ ಅವಿಭಕ್ತ ಕುಟುಂಬದಲ್ಲಿದ್ದ ಆಕೆ ಮಗನಿಗಾಗಿ ಇಬ್ಬರು ದಾಯಿಯರನ್ನು ನೇಮಿಸಿದ್ದಳು. ವಾತ್ಸಲ್ಯಮಯಿ ಭುವನೇಶ್ವರಿಯು ಇತರ ತಾಯಂದಿರು ತಮ್ಮ ತುಂಟ, ಹಠಮಾರಿ ಮಕ್ಕಳೊಂದಿಗೆ ಗದರಿ ಮಾತಾಡುವಂತೆ ಬಿಲೆಗೂ ಹೇಳಿದ್ದುಂಟು: "ನನ್ನಂತಹ ಗುಣಗಳಿರುವ ಮಗನನ್ನು ಕರುಣಿಸು ಎಂದು ಶಿವನನ್ನು ಬೇಡಿದ್ದೆ, ಆದರೆ ಅವನಾದರೋ ತನ್ನ ಗಣಗಳಲ್ಲೊಬ್ಬನನ್ನು ಕಳುಹಿದ್ದಾನೆ!".

ಭುವನೇಶ್ವರಿ ತನ್ನ ಪ್ರೀತಿಯ ಪುತ್ರನ ವಿದ್ಯಾಭ್ಯಾಸದ ಬಗ್ಗೆ ಅತ್ಯಂತ ಆಸಕ್ತಿ ವಹಿಸಿದ್ದಳು. ಆಕೆಯ ಮಡಿಲಲ್ಲಿ ಕುಳಿತು ಪುಟ್ಟ ನರೇಂದ್ರ ದೇವ-ದೇವಿಯರ ಮಹಿಮೆ, ಋಷಿಮುನಿಗಳ ಮಹಾತ್ಮೆಯನ್ನು ಕೇಳುತ್ತಿದ್ದ. ತಾಯಿ ಹೇಳುವ ರಾಮಾಯಣ, ಮಹಾಭಾರತದ ಕತೆಗಳನ್ನು ಆಲಿಸುತ್ತ ತುಂಟ ಬಿಲೆ ತಲ್ಲೀನನಾಗಿ ಬಿಡುತ್ತಿದ್ದ. ಅವು ಅವನ ಮನಸ್ಸಿನ ಮೇಲೆ ಅಗಾಧ ಪ್ರಭಾವವನ್ನು ಬೀರಿದವು. ಬಿಲೆಯ ಮೊದಲ ಆಂಗ್ಲ ಶಿಕ್ಷಣ, ತಾಯಿಯಿಂದಲೇ ಆದದ್ದು. ಬುದ್ಧಿಶಾಲಿಯಾದ ಆಕೆ ಪತಿಯ ಜೀವಿತಕಾಲದಲ್ಲಿ ಒಬ್ಬಳು 'ಮೇಮ್ ಸಾಹೇಬ್' ಅನ್ನು ಮನೆಗೆ ಕರೆಸಿ ಆಕೆಯಿಂದ ಇಂಗ್ಲಿಷ್ ಭಾಷೆಯನ್ನು ಕಲಿತಿದ್ದಳು. ತಮ್ಮ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೂ ಆದ್ಯತೆ ನೀಡುತ್ತ ಅವರಿಗೂ ಆಂಗ್ಲ ಶಿಕ್ಷಣವನ್ನು ಕೊಡಿಸಿದಳು.

ಭುವನೇಶ್ವರಿ ದೇವಿ ತನ್ನ ತಂದೆ-ತಾಯಿಯರ ಕಣ್ಮಣಿ. ಏಕೈಕ ಪುತ್ರಿಯಾದ ಆಕೆ ನೋಡುವುದಕ್ಕೆ ಲಕ್ಷಣವಾಗಿದ್ದಳು. ಆಕೆಯ ಕಣ್ಣುಗಳು ವಿಶಾಲ ಹಾಗೂ ತೇಜೋಮಯವಾಗಿದ್ದವು. ಮುಖದಲ್ಲಿ ಗಾಂಭೀರ್ಯ ಎದ್ದು ಕಾಣುತ್ತಿತ್ತು. ಸಕಲ ಕಾರ್ಯಗಳನ್ನೂ ಆಕೆ ಕುಶಲತೆಯಿಂದಲೂ, ದಕ್ಷತೆಯಿಂದಲೂ ಮಾಡಬಲ್ಲವಳಾಗಿದ್ದಳು. ಒಂದೇ ಸಲ ಕೇಳಿದ್ದ ಯಾವುದೇ ಕವಿತೆಯನ್ನು ಸುಮಧುರ ಕಂಠದಿಂದ ಹಾಡಬಲ್ಲವಳಾಗಿದ್ದು ಕೃಷ್ಣಲೀಲೆಯ ಹಾಡುಗಳೆಂದರೆ ತುಂಬ ಇಷ್ಟಪಡುತ್ತಿದ್ದಳು. ತನ್ನ ಅಸಾಮಾನ್ಯ ಸ್ಮೃತಿಶಕ್ತಿಯನ್ನು ಆಕೆ ಪುತ್ರನಾದ ನರೇಂದ್ರನಾಥ ಹಾಗೂ ಮಹೇಂದ್ರನಾಥರಿಗೆ ಧಾರೆಯೆರೆದಿದ್ದಳು. ಮುಂದೆ ಅಮೆರಿಕದಲ್ಲಿ ಶಿಷ್ಯರು ಅವರ ಜ್ಞಾಪಕ ಶಕ್ತಿಯನ್ನು ಪ್ರಶಂಸಿಸಿದಾಗ, "ಹೌದು, ನನ್ನ ತಾಯಿಗೂ ಇಂಥ ಜ್ಞಾಪಕಶಕ್ತಿಯಿದೆ" ಎಂದು ಸ್ವಾಮಿ ವಿವೇಕಾನಂದರು ಹೆಮ್ಮೆಯಿಂದ ನುಡಿಯುತ್ತಿದ್ದರು. ಪುತ್ರ ನರೇಂದ್ರನಿಗೆ ಆಕೆ ನೀಡಿದ ಮಹತ್ತರ ಪಾಠವೆಂದರೆ, "ಆಜೀವ ಪರ್ಯಂತ ಪವಿತ್ರನಾಗಿರು. ವೈಯಕ್ತಿಕ ಘನತೆ, ಗೌರವಗಳನ್ನು ರಕ್ಷಿಸಿಕೊ. ಅಂತೆಯೇ ಎಂದೂ ಇತರರ ಗೌರವಕ್ಕೆ ಚ್ಯುತಿ ತರಬೇಡ. ಸದಾ ಶಾಂತನಾಗಿರು, ಆದರೆ ಅವಶ್ಯವೆನಿಸಿದಾಗ ದೃಢನಾಗಿರು." ಸಂಸಾರ ಸಾಗರದಲ್ಲಿ ಅನೇಕ ವಿಪತ್ತುಗಳಿಗೆ ಸಿಲುಕಿಕೊಂಡಿರುವುದರ ನೆಪ ಮಾಡಿಕೊಂಡು ನೈತಿಕ ಜೀವನವನ್ನು ಕಡೆಗಣಿಸುವುದು ಅಸಹನೀಯ ಎಂಬುದು ಆಕೆಯ ದೃಢ ಅಭಿಪ್ರಾಯವಾಗಿತ್ತು. ಸ್ವಾಮಿ ವಿವೇಕಾನಂದರು ತಮ್ಮ ಜ್ಞಾನ ವಿಕಾಸಕ್ಕಾಗಿ ತಮ್ಮ ತಾಯಿಗೆ ಎಂದೆಂದೂ ಕೃತಜ್ಞತಾಪೂರ್ವಕ ನಮನಗೈಯುತ್ತಿದ್ದರು. ಭುವನೇಶ್ವರಿ ದೇವಿಯು ಉದಾರ ಚರಿತೆಯೂ ಹೌದು. ಇದಕ್ಕೆ ಸಾಕ್ಷಿಯೆಂದರೆ ಮುಂದೆ ತನ್ನ ಒಬ್ಬ ಪುತ್ರಿಯು ಮಾವನ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಾಗ ಮೊಮ್ಮಕ್ಕಳಾದ ಇಬ್ಬರು ಹೆಣ್ಣುಮಕ್ಕಳನ್ನು ಸ್ವಲ್ಪ ಸಮಯ ನೋಡಿಕೊಂಡದ್ದಲ್ಲದೆ, ಅಳಿಯ ಮರುವಿವಾಹವಾದಾಗ ನವದಂಪತಿಗಳನ್ನು ಮನೆಗೆ ಸ್ವಾಗತಿಸಿ ಹೃತ್ಪೂರ್ವಕವಾಗಿ ಸತ್ಕರಿಸಿದರು.

ವಿಶ್ವನಾಥ ದತ್ತನ ಆಕಸ್ಮಿಕ ನಿಧನದಿಂದ ಕುಟುಂಬ ತತ್ತರಿಸಿತು. ತಂದೆಯ ಶ್ರಾದ್ಧಾದಿ ಕರ್ಮಗಳು ಮುಗಿಯುತ್ತಲೇ ಸಂಸಾರದ ಆರ್ಥಿಕ ಸ್ಥಿತಿ ಭಯಾನಕವಾಗಿರುವುದು ತರುಣ ನರೇಂದ್ರನಿಗೆ ತಿಳಿದುಬಂತು. ಸಾಲದೆಂಬಂತೆ ಆಸ್ತಿಯನ್ನು ಕುರಿತು ವ್ಯಾಜ್ಯ ಬೇರೆ. ಶೋಕಸಂತಪ್ತ ಪರಿವಾರಕ್ಕೆ ನೆರವು ನೀಡಲು ಯಾರೂ ಮುಂದಾಗಲಿಲ್ಲ. ಆತ್ಮೀಯ ಸ್ವಜನರೆನಿಸಿಕೊಂಡವರೆಲ್ಲ ಅಗಲಿದರು. ಬದುಕಿನ ರಣರಂಗದಲ್ಲಿ ನಿಃಸಹಾಯಕರಾಗಿ ದತ್ತ ಕುಟುಂಬದವರು ಹೋರಾಡಬೇಕಾಯಿತು. ಸೂತಕ ಕಳೆಯುವುದಕ್ಕೆ ಮುಂಚೆಯೇ ನರೇಂದ್ರ ನೌಕರಿಗಾಗಿ ಅಲೆದಾಡಿದರೂ ಪ್ರಯತ್ನವೆಲ್ಲ ವಿಫಲವಾಯಿತು. ನಿಃಸ್ವಾರ್ಥತೆ, ಸಹಾನುಭೂತಿಗಳೆಂಬ ಗುಣಗಳು ಪ್ರಪಂಚದಲ್ಲಿಲ್ಲ, ದುರ್ಬಲರಿಗೂ ಬಡವರಿಗೂ ಇಲ್ಲಿ ಸ್ಥಾನವಿಲ್ಲ ಎಂಬುದು ನರೇಂದ್ರನಿಗೆ ಮನವರಿಕೆ ಆಯಿತು. ಯೋಚನೆ ಹೆಚ್ಚಾದಂತೆ ಪ್ರಪಂಚವು ದಾನವನ ಸೃಷ್ಟಿಯೇ ಎಂದೆನಿಸಿತು. ಅದೇ ಸಮಯದಲ್ಲಿ ಒಂದು ಮುಂಜಾನೆ ಎಂದಿನಂತೆ ಭಗವಂತನ ನಾಮಸ್ಮರಣೆ ಮಾಡುತ್ತ ಹಾಸಿಗೆ ಯಿಂದೆದ್ದಾಗ, "ಸಾಕು ಸುಮ್ಮನಿರು! ಬಾಲ್ಯದಿಂದಲೂ ಭಗವಂತನನ್ನು ನೆನೆಯುತ್ತಲೇ ಇದ್ದೀಯೆ. ಅವನು ಮಾಡಿದ್ದು ಇಷ್ಟೆ ತಾನೇ!" ಎಂದು ನೊಂದ ತಾಯಿಯ ಬಾಯಿಂದ ಹೊರಬಿದ್ದ ಮಾತುಗಳು ನರೇಂದ್ರನ ಹೃದಯವನ್ನು ತಿವಿದವು. ಸ್ತಂಭಿತನಾದ ನರೇಂದ್ರ ಆಲೋಚಿಸಿದ, "ಹಾಗಾದರೆ ಭಗವಂತನು ನಿಜವಾಗಿಯೂ ಇರು ವನೆ? ಒಂದು ವೇಳೆ ಇದ್ದರೂ ಕೂಡ ನಮ್ಮೆಲ್ಲರ ಮೊರೆಗೆ ಅವನು ಕಿವಿಗೊಡುವನೆ? ಶಿವಮಯವಾದ ಈ ಜಗತ್ತಿನಲ್ಲಿ ಅಶುಭವೇಕೆ? ಮಂಗಳಮಯನ ಪ್ರಭುತ್ವದಲ್ಲಿ ಇಷ್ಟೊಂದು ಅಮಂಗಳವೇ?" ಬಿ.ಎ. ಪಾಸಾದರೂ ಕಲ್ಕತ್ತೆಯ ಆಫೀಸುಗಳಲ್ಲಿ ತಿಂಗಳಿಗೆ ಹದಿನೈದು ರೂಪಾಯಿ ವೇತನದ ಕೆಲಸವನ್ನೂ ದಕ್ಕಿಸಿಕೊಳ್ಳದಾದ ನರೇಂದ್ರನಿಗೆ ಭಗವಂತನ ಕುರಿತು ಅನೇಕ ಪ್ರಶ್ನೆಗಳು ಬಾಧಿಸತೊಡಗಿದವು.

ಸುಶಿಕ್ಷಿತ ಬಂಗಾಳಿ ಮಧ್ಯಮವರ್ಗದ ಕುಟುಂಬದ ಆದಾಯ ತಿಂಗಳಿಗೆ ೧೫ ರೂಪಾಯಿಗಳಾಗಿದ್ದ ಆ ಕಾಲದಲ್ಲಿ ದತ್ತ ಕುಟುಂಬದ ಖರ್ಚು ಭರ್ಜರಿ ೧೦೦೦ ರೂಪಾಯಿಗಳು! ಪತಿಯ ವಿಯೋಗದ ನಂತರ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿದ ಭುವನೇಶ್ವರಿ ದೇವಿ ದುಃಖಿತಳಾದರೂ ಧೃತಿಗೆಡಲಿಲ್ಲ. ತನ್ನಲ್ಲಿದ್ದ ಆಭರಣಗಳನ್ನು ಮಾರಿ ತಿಂಗಳ ವೆಚ್ಚವನ್ನು ಕೇವಲ ೩೦ ರೂಪಾಯಿಗಳಿಗೆ ಇಳಿಸಿದಳು. ನಂತರದ ದಿನಗಳಲ್ಲಿ ಸ್ವಾಮಿ ಶಾರದಾನಂದರು ಹೇಳುತ್ತಿದ್ದರು: "ಬಡತನದಲ್ಲಿ ಭುವನೇಶ್ವರಿ ದೇವಿಯ ಧೈರ್ಯ, ಸಹಿಷ್ಣುತೆ, ತೇಜಸ್ಸು ಮುಂತಾದ ಗುಣಗಳು ವಿಶೇಷವಾಗಿ ವಿಕಸನಗೊಂಡವು. ಒಂದು ದಿನವಾದರೂ ಆಕೆ ವಿಷಣ್ಣಳಾಗಿರುವುದು ಕಂಡುಬರುತ್ತಿರಲಿಲ್ಲ. ಕುಟುಂಬದ ಆರ್ಥಿಕ ಪರಿಸ್ಥಿತಿ ಚಿಂತಾಜನಕವಾಗಿತ್ತು. ಸದ್ಗುಣಸಂಪನ್ನ ಜ್ಯೇಷ್ಠಪುತ್ರನು ಕೆಲಸಕ್ಕಾಗಿ ಅಲೆಯುತ್ತಿದ್ದ. ಅದಲ್ಲದೆ ಶ್ರೀರಾಮಕೃಷ್ಣರ ಸಂಸರ್ಗದಲ್ಲಿ ಅವನು ವೈರಾಗ್ಯವನ್ನು ತಾಳಿ ಸಂಸಾರವನ್ನು ಚಿರಕಾಲವೂ ತ್ಯಜಿಸಬೇಕೆಂದಿದ್ದಾಗ ಭುವನೇಶ್ವರಿದೇವಿ ಎದೆಗುಂದದೆ ತನ್ನ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದಳು".

ಒಂದೆಡೆ ಭುವನೇಶ್ವರಿ ದೇವಿ ಸಂಸಾರಜ್ವಾಲೆಯಲ್ಲಿ ಜರ್ಝರಿತಳಾಗುತ್ತಿದ್ದರೆ, ಮತ್ತೊಂದೆಡೆ ನರೇಂದ್ರ-ಠಾಕೂರರ ನಡುವಿನ ಸಮಾಗಮ ತೀವ್ರವಾಗುತ್ತಿತ್ತು. ಒಮ್ಮೆ ಭುವನೇಶ್ವರಿ ದೇವಿ ನಿತ್ಯ ಪೂಜೆ-ಜಪಾದಿಗಳಿಗೆ ಉಪಯೋಗಿಸುತ್ತಿದ್ದ ಮಡಿವಸ್ತ್ರವು ಹರಿದುಹೋದಾಗ ಹೊಸ ವಸ್ತ್ರವನ್ನು ತಂದುಕೊಡಲು ನರೇಂದ್ರನಿಗೆ ಹೇಳಿದಳು. ಇದು ಸಾಧ್ಯವಾಗದೆಂದು ತಿಳಿದಿದ್ದ ಅವನು ತಲೆ ಬಾಗಿಸಿಕೊಂಡು ಮೌನವಾಗಿ ಹೊರಟುಹೋದ. ಅದೇ ಸಮಯದಲ್ಲಿ ಭಕ್ತನೊಬ್ಬನಿಂದ ಹೊಸ ವಸ್ತ್ರವನ್ನು ಪಡೆದಿದ್ದ ಶ್ರೀರಾಮಕೃಷ್ಣರು ನರೇಂದ್ರನನ್ನು ಕರೆದು ತನ್ನ ತಾಯಿಗಾಗಿ ಅದನ್ನು ಸ್ವೀಕರಿಸುವಂತೆ ಹೇಳಿದರು. ನರೇಂದ್ರ ಸ್ವಾಭಿಮಾನದಿಂದ ಅದನ್ನು ತೆಗೆದುಕೊಳ್ಳದಿದ್ದಾಗ ಪರಮಹಂಸರು ಬೇರೆಯವರ ಮೂಲಕ ಭುವನೇಶ್ವರಿಗೆ ವಸ್ತ್ರವನ್ನು ಕಳುಹಿಸಿಕೊಟ್ಟರು. ಶ್ರೀರಾಮಕೃಷ್ಣರೆಡೆಗೆ ಆಕರ್ಷಿತನಾದ ನರೇಂದ್ರ ಮನೆಯ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತಿಲ್ಲವೆಂದು ಬೇಸತ್ತ ಭುವನೇಶ್ವರಿ, "ಇದೆಲ್ಲ ಏನು ನಡೆಯುತ್ತಿದೆ, ಬಿಲು? ಮನೆಯ ಕಡೆ ಚೂರೂ ಗಮನವಿಲ್ಲ? ಹಗಲು ರಾತ್ರಿಯೆನ್ನದೆ ಆರಾಮವಾಗಿ ಓಡಾಡಿಕೊಂಡಿರುವೆಯಲ್ಲ!" ಎಂದಾಗ ನರೇಂದ್ರ ನೇರವಾಗಿ ಉತ್ತರಿಸಿದ, "ಮನೆಯನ್ನು ನಡೆಸಲು ನಾನ್ಯಾರಮ್ಮ? ಯಾರು ನಡೆಸಬೇಕೋ ಅವರು ನಡೆಸುತ್ತಾರೆ, ಬಿಡು." ಪರಿವಾರದ ಸಾಮಾನ್ಯ ಆಹಾರ-ವಸ್ತ್ರಗಳಿಗೆ ತೊಂದರೆ ಆಗದಂತೆ ಶ್ರೀರಾಮಕೃಷ್ಣರು ಆಶೀರ್ವಾದ ಗೈದರು. ಮನೆಗೆ ಸಂಬಂಧಿಸಿದ ವಿವಾದದ ಕುರಿತು, "ಮೊಕದ್ದಮೆಯನ್ನು ಚೆನ್ನಾಗಿ ನಡೆಸು. ಭುಸುಗುಟ್ಟು, ಆದರೆ ಕಚ್ಚಬೇಡ," ಎಂದೇ ಅವರು ನರೇಂದ್ರನಿಗೆ ಉಪದೇಶಿಸಿದರು. ಅದಕ್ಕಾಗಿ ಮಾತಾ-ಪುತ್ರರಿಬ್ಬರೂ ಕಲ್ಕತ್ತಾದ ಹೈಕೋರ್ಟಿಗೆ ಹೋಗುತ್ತಿದ್ದು, ನ್ಯಾಯಪತ್ರ, ದಾಖಲೆಗಳಿಗೆ ಭುವನೇಶ್ವರಿ ದೇವಿ ಸಹಿ ಹಾಕುತ್ತಿದ್ದಳು. ಇಷ್ಟಾದರೂ ವಕೀಲ ಮನೆತನದ ನರೇಂದ್ರನ ಮನಸ್ಸು ವೈರಾಗ್ಯದೆಡೆಗೇ ಹರಿಯುತ್ತಿದ್ದುದನ್ನು ಗಮನಿಸಿದ ಭುವನೇಶ್ವರಿ ದೇವಿ ಕಡೆಯ ಪ್ರಯತ್ನವಾಗಿ ಶ್ರೀರಾಮಕೃಷ್ಣರ ಸಹಾಯವನ್ನು ಕೋರಲು ತಮ್ಮ ಕಿರಿಯ ಮಗನೊಂದಿಗೆ ಕಾಶೀಪುರದ ತೋಟದ ಮನೆಗೆ ಬಂದರು. ಶ್ರೀರಾಮಕೃಷ್ಣರ ಕೋಣೆ ಯನ್ನು ಪ್ರವೇಶಿಸುತ್ತಲೆ, ರುಗ್ಣಶಯ್ಯೆಯಲ್ಲಿದ್ದ ಅವರು ಹೇಳಿದರು: "ವೈದ್ಯರು ನನಗೆ ಮಾತನಾಡಲು ನಿಷೇಧಿಸಿದ್ದಾರೆ. ಆದರೂ ನಿಮ್ಮೊಂದಿಗೆ ನಾನು ಮಾತನಾಡಲೇಬೇಕಾಗಿದೆ. ನೀವು ಬಂದದ್ದು ಒಳ್ಳೆಯದೇ ಆಯಿತು. ನರೇಂದ್ರನನ್ನು ನಿಮ್ಮೊಡನೆ ಕರೆದುಕೊಂಡು ಹೋಗಿ.... 'ನರೇನ್, ನಿನ್ನ ಮೇಲೆ ನಿನ್ನ ತಾಯಿ ಹಾಗೂ ತಮ್ಮಂದಿರ ಜವಾಬ್ದಾರಿಯಿದೆ. ನೀನು ಸಂನ್ಯಾಸಿಯಾಗುವುದು ಸರಿಯಲ್ಲ' ಎಂದು ನಾನವನಿಗೆ ಹೇಳಿದ್ದೇನೆ" ಎಂದರು. ಕುದುರೆಗಾಡಿಯಲ್ಲಿ ಕುಳಿತು ಮನೆಯತ್ತ ಸಾಗುವಾಗ ಭುವನೇಶ್ವರಿ ದೇವಿ ಪುತ್ರ ನರೇಂದ್ರನಿಗೆ ಪರಮಹಂಸರ ಮಾತುಗಳನ್ನು ಹೇಳಿದಾಗ, "ಅವರು ಕಳ್ಳನಿಗೆ ಕಳ್ಳತನ ಮಾಡಲೂ, ಮನೆ ಮಾಲಿಕನಿಗೆ ಎಚ್ಚರದಿಂದಿರಲೂ ಉಪದೇಶ ಮಾಡುತ್ತಾರೆ!" ಎಂದುತ್ತರಿಸಿದ. ಈ ಮಾತುಗಳ ಅರ್ಥ ತಾಯಿಗಾಗದೆ ಇರಲಿಲ್ಲ. ಕಡೆಗೆ ತಾಯಿಯ ಒಪ್ಪಿಗೆಯನ್ನು ಪಡೆದೇ ನರೇಂದ್ರನು ಸಂನ್ಯಾಸವನ್ನು ಸ್ವೀಕರಿಸಿದ್ದರೂ ಕೂಡ, ಭುವನೇಶ್ವರಿಯು ಶ್ರೀರಾಮಕೃಷ್ಣರ ಪರಮ ಭಕ್ತರಲ್ಲಿ ಒಬ್ಬರಾದ ತಮ್ಮ ಸಮೀಪದ ಬಂಧು ರಾಮಚಂದ್ರದತ್ತರನ್ನು ಕೇಳಿದ್ದರಂತೆ: "ಬಿಲೂ ಮತ್ತೆ ಸಂಸಾರಕ್ಕೆ ಹಿಂದಿರುಗುವುದಿಲ್ಲವೇ?"ಎಂದು. ಎಷ್ಟಾದರೂ ತಾಯಿಕರುಳಲ್ಲವೇ? ಉತ್ತರ ತೋಚದ ರಾಮಚಂದ್ರ ದತ್ತರೂ ಸಂತೈಸಿದರು: "ನಿಮ್ಮನ್ನು ಬಿಟ್ಟು ಅವನು ಹೋಗುವುದಾದರೂ ಎಲ್ಲಿಗೆ?"

ಶ್ರೀರಾಮಕೃಷ್ಣರ ನಿರ್ಯಾಣಾನಂತರ ಬಾರಾನಗರ ಮಠದಲ್ಲಿ ಪರಮಹಂಸರ ಸಂನ್ಯಾಸಿ ಶಿಷ್ಯರು ಕಠೋರ ತಪಸ್ಸಿನಲ್ಲಿ ಮುಳುಗಿದರು. ಸ್ವಾಮೀಜಿಯವರಿಗಾದರೋ ಉಭಯ ಸಮಸ್ಯೆ— ಪಾರಿವಾರಿಕ ಮೊಕದ್ದಮೆಯನ್ನೂ ನಡೆಸಬೇಕು, ವೈರಾಗ್ಯದಿಂದೊಡಗೂಡಿದ ಸಾಧನೆಯನ್ನೂ ಮಾಡಬೇಕು. ಪ್ರಪಂಚಕ್ಕೆ ಸಂಬಂಧಿಸಿದುದೆಲ್ಲ ನಿಂದನೀಯ ಅಥವಾ ವರ್ಜನೀಯ ಎಂಬ ಮನೋಭಾವ ಅವರಿಗಿರಲಿಲ್ಲ. ಆದ್ದರಿಂದಲೇ ಸಂನ್ಯಾಸದ ಸಾಧನೆಗಾಗಿ ಮಾತೃಭಕ್ತಿಯನ್ನು ಬಲಿಕೊಡದೆ ತಾಯಿಯ ಜವಾಬ್ದಾರಿಯನ್ನು ಪ್ರೇಮದಿಂದ ಹೊತ್ತರು. ಬಳಿಕ ಪರಿವ್ರಾಜಕರಾಗಿದ್ದಾಗಲೂ ಅವರಿಗೆ ತಾಯಿಯ ಬಗ್ಗೆ ಕಾಳಜಿ ಇದ್ದೇ ಇತ್ತು. ಚೆನ್ನೈನಲ್ಲಿ ಮನ್ಮಥಬಾಬುವಿನ ಮನೆಯಲ್ಲಿದ್ದಾಗ ತಾಯಿ ತೀರಿಕೊಂಡಂತೆ ಸ್ವಪ್ನವಾಗಿ ಸ್ವಾಮೀಜಿಯವರ ಹೃದಯ ತಲ್ಲಣಿಸಿತು. ಮಠದೊಂದಿಗೂ ಸಂಪರ್ಕ ಇಟ್ಟುಕೊಂಡಿರದ ಆ ದಿನಗಳಲ್ಲಿ ಮನೆಗೆ ಪತ್ರ ಬರೆಯುವುದಂತೂ ದೂರದ ಮಾತು. ಈ ಬಗ್ಗೆ ಮನ್ಮಥ ಬಾಬುವಿಗೆ ತಿಳಿಸಿದಾಗ ಅವರು ಕಲ್ಕತ್ತೆಕ್ಕೆ ತಂತಿ ಕಳುಹಿಸಿದರು. ಚೆನ್ನೈನ ಸ್ನೇಹಿತರು ಸ್ವಾಮೀಜಿಯವರನ್ನು ಅಮೆರಿಕಕ್ಕೆ ಕಳುಹಿಸುವ ಉತ್ಸಾಹದಲ್ಲಿದ್ದರು. ತಾಯಿಯ ಕುಶಲವಾರ್ತೆ ತಿಳಿಯದೆ ವಿದೇಶ ಯಾತ್ರೆಯ ಕಾರ್ಯಕ್ರಮವನ್ನು ಕೈಗೊಳ್ಳುವುದು

ಷೇಗ’ ನಗರದಿಂದ ತುಸು ದೂರದಲ್ಲಿದ್ದ ಮಂತ್ರವಾದಿಗಳೊಬ್ಬರು ತಾಯಿಗೆ ಯಾವ ಆಪತ್ತೂ ಸಂಭವಿಸಿಲ್ಲವೆಂದೂ, ಶೀಘ್ರದಲ್ಲಿಯೇ ಸ್ವಾಮೀಜಿಯವರು ಧರ್ಮಪ್ರಚಾರಕ್ಕಾಗಿ ವಿದೇಶಕ್ಕೆ ಹೊರಡುವರೆಂದೂ ಖಚಿತಪಡಿಸಿದಾಗ ಸ್ವಾಮೀಜಿಯವರಿಗೆ ನೆಮ್ಮದಿ ಎನಿಸಿತು. ಮಂತ್ರವಾದಿಗಳು, ಐಂದ್ರಜಾಲ ಮುಂತಾದ ಇಂತಹ ವಿಷಯಗಳಲ್ಲಿ ಎಂದೂ ಆಸಕ್ತಿ ಇರದಿದ್ದ ಸ್ವಾಮೀಜಿಗೆ ತಾಯಿಯ ಆರೋಗ್ಯದ ಬಗ್ಗೆ ಎಷ್ಟು ಕಾತರರಾಗಿದ್ದರೆಂದರೆ, ಮಾಹಿತಿಗಾಗಿ ಇಂತಹವರನ್ನೂ ಆಶ್ರಯಿಸಿದರು. ಇದು ಅವರ ತಾಯಿಯೆಡಗಿನ ಪ್ರೀತಿಗೆ ಒಂದು ನಿದರ್ಶನ.

ಮಾತೃಭೂಮಿಯ ಉದ್ಧಾರಕ್ಕಾಗಿ ಅಮೆರಿಕಕ್ಕೆ ಹೋಗಿ ಧರ್ಮಪ್ರಚಾರ ಮಾಡಲು ಶ್ರೀಮಾತೆ ಶಾರದಾದೇವಿಯವರ ಕೃಪಾಶೀರ್ವಾದ ಅನಿವಾರ್ಯವೆಂದು ಎಣಿಸಿದ ಸ್ವಾಮೀಜಿ ಶ್ರೀಮಾತೆಯವರ ಸಮ್ಮತಿಯನ್ನು ಪಡೆದವರೇ ರಾಮದೂತ ಹನುಮಂತನಂತೆ ಸಮುದ್ರವನ್ನು ದಾಟಿ ವಿದೇಶ ಪ್ರಯಾಣಕ್ಕೆ ಸಿದ್ಧರಾದರೆಂಬುದು ಎಲ್ಲರಿಗೂ ತಿಳಿದ ವಿಚಾರ. ಸ್ವಾಮೀಜಿಯ ಸೋದರ ಮಹೇಂದ್ರನಾಥನು ಖೇತ್ರಿಯ ಮಹಾರಾಜರಿಗೆ ಬರೆದ ಪತ್ರಗಳಿಂದ ಅಣ್ಣನಿಗೆ ಪ್ರಪಂಚ ಪರಿಭ್ರಮಣಕ್ಕಾಗಿ ಹೆತ್ತತಾಯಿಯ ಅನುಮತಿ, ಆಶೀರ್ವಾದಗಳು ದೊರೆತಿದ್ದ ವಿಷಯವೂ ತಿಳಿಯುತ್ತದೆ. ಸ್ವಾಮೀಜಿಯ ಭಾವನಾತ್ಮಕ ಜೀವನದಲ್ಲಿ ಜಗಜ್ಜನನಿ ಶ್ರೀಶಾರದಾದೇವಿಯವರೂ, ಮಾತೃಭೂಮಿ ಭಾರತಮಾತೆಯೂ, ಜನ್ಮದಾತೆ ಭುವನೇಶ್ವರೀ ದೇವಿಯವರೂ ಉನ್ನತ ಭಕ್ತಿ-ಗೌರವಗಳನ್ನು ಪಡೆದಿದ್ದರು. ಸ್ವಾಮಿ ವಿವೇಕಾನಂದರು ತಮ್ಮ ತಾಯಿಗೆ ಬರೆದ ಪತ್ರವಾಗಲಿ ಅಥವಾ ತಾಯಿಯು ತಮ್ಮ ಪ್ರೀತಿಯ ಮಗನಿಗೆ ಬರೆದ ಪತ್ರವಾಗಲಿ ಈವರೆಗೆ ದೊರೆತಿಲ್ಲ. ಆದರೆ ಜುನಾಗಢದ ದಿವಾನ್ ಹರಿದಾಸ ದೇಸಾಯಿಯವರು ಕಲ್ಕತ್ತಾಕ್ಕೆ ಹೋದಾಗ ಸ್ವಾಮೀಜಿಯ ತಾಯಿ-ತಮ್ಮಂದಿರನ್ನು ಭೇಟಿಯಾದ ವಿಚಾರ ಅವರಿಗೆ ಬರೆದಾಗ, ಸ್ವಾಮೀಜಿ ಸಂತೋಷವನ್ನು ವ್ಯಕ್ತಪಡಿಸುತ್ತ, ಈ ಮಹಾನ್ ವಿಶ್ವದಲ್ಲಿ ತಾವು ಯಾರನ್ನಾದರೂ ಪ್ರೀತಿಸುತ್ತಿರುವುದಾದರೆ, ತಮ್ಮ ತಾಯಿಯನ್ನು ಮಾತ್ರವೇ ಎಂದುತ್ತರಿಸಿದರು.

ಅಮೆರಿಕದಲ್ಲಿ ಸ್ವಾಮೀಜಿಯವರ ಜನಪ್ರಿಯತೆಯನ್ನು ಸಹಿಸಲಾರದೆ ವಿರೋಧಿಗಳು ಅವರ ಚರಿತ್ರಹನನವನ್ನು ಮಾಡಿದಾಗ, ಈ ವಿಚಾರ ಕಿವಿಗೆ ಬಿದ್ದರೆ ಸಂಸಾರದಲ್ಲಿ ಈಗಾಗಲೆ ಬಹಳವಾಗಿ ನೊಂದಿದ್ದ ತಾಯಿಯ ಪಾಡು ಏನಾಗಬಹುದೆಂದು ಭಾವಿಸಿ ಸ್ವಾಮೀಜಿ ವ್ಯಥೆಪಟ್ಟರು. ವಿಶ್ವವನ್ನು ಜಯಿಸಿದ್ದ ಸ್ವಾಮೀಜಿಗೆ ತಮ್ಮ ಮೇಲಿನ ತಾಯಿಯ ಅಭಿಪ್ರಾಯ ಅತಿ ಮುಖ್ಯವಾಗಿತ್ತು. ಸ್ವಾಮೀಜಿಯ ಶಿಷ್ಯರು ಹಾಗು ಸ್ನೇಹಿತರು ಅವರ ತಾಯಿಯ ಬಗ್ಗೆ ಕುತೂಹಲ ತೋರಿದಾಗ ಆಕೆಯಿಂದ ತಾವು ಬಾಲ್ಯದಲ್ಲಿ ಕೇಳಿದ್ದ ಕತೆಗಳನ್ನು ಹೇಳುತ್ತಿದ್ದರು. ತಮ್ಮ ಜ್ಞಾಪಕಶಕ್ತಿಯಂತೆ ಆತ್ಮಶಕ್ತಿಯೂ ಆಕೆಯದೇ ಕೊಡುಗೆ ಎನ್ನುತ್ತ ಆಕೆಯನ್ನು ಸ್ಮರಿಸಿ, ಸ್ತುತಿಸುತ್ತಿದ್ದರು. ತಮ್ಮ ತಾಯಿ ಪರಿಶುದ್ಧರೂ, ಪವಿತ್ರರೂ ಆಗಿದ್ದು ತಮಗೆ ಲಭಿಸಿರುವ ಆತ್ಮಸಿದ್ಧಿಗೆ ತಾವು ಆಕೆಗೆ ಚಿರಋಣಿ ಎನ್ನುತ್ತಿದ್ದರು. ಅಪೂರ್ವಳೂ, ಸ್ವಾರ್ಥಶೂನ್ಯಳೂ, ಸಹಿಷ್ಣುವೂ, ನಿತ್ಯಕ್ಷಮಾಶೀಲಳೂ ಆದ ತಾಯಿಯ ಬಗ್ಗೆ ಸ್ವಾಮೀಜಿ ತಮ್ಮ ಶ್ರದ್ಧಾಭಕ್ತಿಗಳನ್ನು ನಿವೇದಿಸಲು ಮರೆಯಲಿಲ್ಲ. ಬಾಸ್ಟನ್‌ನಲ್ಲಿ ಭಾರತೀಯ ನಾರಿಯ ಆದರ್ಶಗಳ ಮೇಲಿನ ಉಪನ್ಯಾಸದಲ್ಲಿ ಸ್ವಾಮೀಜಿಯವರಿಂದ ಶ್ರೀಶಾರದಾದೇವಿ ಹಾಗೂ ಭುವನೇಶ್ವರಿ ದೇವಿಯ ಬಗ್ಗೆ ಕೇಳಿದ ಶ್ರೋತೃವೃಂದದವರು ಕ್ರಿಸ್‌ಮಸ್ ಶುಭಾಶಯಗಳೊಂದಿಗೆ ಭುವನೇಶ್ವರಿ ದೇವಿಯವರನ್ನು ಅಭಿನಂದಿಸುತ್ತ ಪತ್ರವನ್ನು ಬರೆದರು. ಭಾರತದ ಆಬಾಲವೃದ್ಧ ವನಿತೆಯರ ಕಲ್ಯಾಣಕ್ಕಾಗಿ ಅದುವರೆಗೆ ಸ್ವಾಮೀಜಿಯವರು ಏನು ಸಾಧಿಸಲು ಸಮರ್ಥರಾಗಿದ್ದರೋ ಅದು ತಮ್ಮ ಪರಮಾಶೀರ್ವಾದದಿಂದಲೇ ಸಾಧ್ಯವಾಗಿರುವುದಾಗಿ ಸ್ವಾಮೀಜಿಯವರು ತಮಗೆ ಹೇಳಿರುವುದಾಗಿ ತಿಳಿಸುತ್ತ, “ಹೇ ತಾಯಿ, ತಮ್ಮ ಜೀವನದ ಕಾರ್ಯಕಲಾಪವು ತಮ್ಮ ಪುತ್ರನ ಸುಚರಿತ ವ್ಯಕ್ತಿತ್ವದಲ್ಲಿ ಪ್ರತಿಬಿಂಬಿಸುತ್ತಿದೆ. ಈ ಮಹತ್‌ಕಾರ್ಯದ ಪ್ರತಿಫಲವನ್ನು ಪಡೆದು ನಾವು ನಮ್ಮ ಹೃದಯಾಂತರಾಳದಿಂದ ತಮಗೆ ಕೃತಜ್ಞತೆಯನ್ನು ಅರ್ಪಿಸುತ್ತಿದ್ದೇವೆ” ಎಂದು ಅವರು ಬರೆದರು.

ಸ್ವಾಮೀಜಿಯ ಸೋದರ ಮಹೇಂದ್ರನಾಥ ಜೀವನೋಪಾಯಕ್ಕಾಗಿ ವಿದೇಶಕ್ಕೆ ಹೋದರು: ಭೂಪೇಂದ್ರನಾಥ ಮಾತೃಭೂಮಿಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾತ್ರವಹಿಸಿ ಜೈಲು ಸೇರಿ, ಬಿಡುಗಡೆಯಾದಾಗ ಮತ್ತೆ ಜೈಲುವಾಸ ತಪ್ಪಿಸಿಕೊಳ್ಳಲು ವೇಷಮರೆಸಿಕೊಂಡು ಓಡಾಡುತ್ತಿದ್ದರು. ಹೀಗಿರುವಾಗ ಡಿಸೆಂಬರ್ ೧೮೯೮ರಲ್ಲಿ ಖೇತ್ರಿ ಮಹಾರಾಜನಿಗೆ ಸ್ವಾಮೀಜಿ ಬೇಲೂರು ಮಠದಿಂದ ಬರೆದ ಪತ್ರದಲ್ಲಿ ಹಿರಿಯ ಮಗನಾದ ತನ್ನಿಂದ ತಾಯಿಗಾದ ದುಃಖವನ್ನು ವಿವರಿಸುತ್ತ ಆಕೆ ತನ್ನ ಕಡೆಯ ದಿನಗಳನ್ನು ಶಾಂತಿಯಿಂದ ಕಳೆಯುವಂತೆ ವಾಸಿಸಲು ಯೋಗ್ಯವಾದ ಮನೆಯನ್ನು ಕಟ್ಟಿಸಿಕೊಡುವಂತೆ ಹೇಳಿ, ಆಕೆಯ ಖರ್ಚಿಗಾಗಿ ಆರ್ಥಿಕ ನೆರವನ್ನು ಕೋರಿದರು. ಒಂದು ಕಾಲದಲ್ಲಿ ಸಂನ್ಯಾಸದ ಆದರ್ಶಕ್ಕಾಗಿ ಗೃಹವನ್ನು ತ್ಯಜಿಸಿದ್ದರೆ ಈಗ ಸಂನ್ಯಾಸದ ಅತ್ಯುನ್ನತ ಶಿಖರದಲ್ಲಿ ಪ್ರತಿಷ್ಠಿತರಾಗಿ ತಾಯಿಯ ಸಂಪೂರ್ಣ ಜವಾಬ್ದಾರಿಯನ್ನು ನಿಭಾಯಿಸಲು ಅಣಿಯಾದರು. ಇದಕ್ಕೂ ಮಿಗಿಲಾದ ಆದರ್ಶವುಂಟೆ?

ಪಶ್ಚಿಮದಿಂದ ಹಿಂದಿರುಗಿದ ಸ್ವಾಮೀಜಿ ಬೇಲೂರು ಮಠದಲ್ಲಿದ್ದಾಗ ಭುವನೇಶ್ವರೀ ದೇವಿ ಮಗನನ್ನು ಕಾಣಲು ಆಗಾಗ ಬರುತ್ತಿದ್ದರು. ಅಂಗಳದಲ್ಲಿ ನಿಂತು ವಾತ್ಸಲ್ಯಭರಿತ ಉಚ್ಚ ದನಿಯಲ್ಲಿ ‘ಬಿಲೂsss’ ಎಂದು ಹಳೆಯ ಹೆಸರನ್ನೇ ಕರೆದೊಡನೆಯೇ ಜಗದ್ವಿಜೇತ ಸ್ವಾಮಿ ವಿವೇಕಾನಂದರು ಮುಗ್ಧ ಬಾಲಕನಂತೆ ಮಹಡಿಯಿಂದ ಕೆಳಗಿಳಿದು ಬರುತ್ತಿದ್ದರು. ಇಬ್ಬರೂ ಮೆಲುದನಿಯಲ್ಲಿ ಬಹಳ ಹೊತ್ತು ಮಾತನಾಡುತ್ತಿದ್ದರು. ಬಳಿಕ ತೃಪ್ತಿಯಿಂದ ತಾಯಿ ಮನೆಗೆ ಮರಳುತ್ತಿದ್ದಳು. ಸ್ವಾಮೀಜಿ ಕೂಡ ತಾಯಿಯನ್ನು ನೋಡಿಬರಲು ಮನೆಗೆ ಹೋಗುತ್ತಿದ್ದರು; ಒಮ್ಮೊಮ್ಮೆ ಹಣ್ಣು-ಹಂಪಲು, ಕಾಯಿ-ಪಲ್ಯೆಗಳನ್ನೂ ಕಳುಹಿಸು

ತ್ತಿದ್ದರು. ಒಂದು ದಿನ ಮಧ್ಯಾಹ್ನ ಇನ್ನೇನು ತಾಯಿಯ ಊಟ ಮುಗಿಯಿತು ಎನ್ನುವಷ್ಟರಲ್ಲಿ ಇದ್ದಕ್ಕಿದ್ದಂತೆ ಸ್ವಾಮೀಜಿ ತಾಯಿಯ ಮುಂದೆ ಹಾಜರು. ಸ್ವಾಮೀಜಿಗೆ ತಾಯಿಯ ಎಲೆಯಿಂದ ಸ್ವಲ್ಪ ಪ್ರಸಾದ ತಿನ್ನಬೇಕೆಂಬ ಆಸೆಯಾಯಿತು. ಎಲೆಯಲ್ಲಿ ಕೆಲವು ನುಗ್ಗೇ ಕಾಯಿ ದಂಟುಗಳು ಮಾತ್ರವೇ ಉಳಿದಿದ್ದುವು. ತಾಯಿಯ ಮಾತನ್ನು ಕೇಳದೆ ಅವುಗಳನ್ನೇ ಸ್ವೀಕರಿಸಿ ಆನಂದಿಸಿದರು ಸ್ವಾಮೀಜಿ!

೧೯೦೧ರಲ್ಲಿ ತಾಯಿಯ ಮನದಾಸೆಯನ್ನು ಈಡೇರಿಸಲು ಸ್ವಾಮೀಜಿ ಅವರನ್ನು ಚಂದ್ರನಾಥ, ಕಾಮಾಖ್ಯ ಮುಂತಾದ ಈಶಾನ್ಯ ಭಾರತದ ತೀರ್ಥಕ್ಷೇತ್ರಗಳಿಗೆ ಕರೆದುಕೊಂಡು ಹೋದರು. ತಾಯಿಯ ಇಚ್ಛಾನುಸಾರ ಕೊಲ್ಕತದ ಕಾಳೀಘಾಟಿನ ಕಾಳಿಕಾದೇವಿಗೂ ಬಲಿಯನ್ನು ಒಪ್ಪಿಸಿದರು. ಅನಾರೋಗ್ಯದಿಂದ ಆಗಲೇ ಬಹಳಷ್ಟು ಬಳಲಿದ್ದ ಸ್ವಾಮೀಜಿ ತಾವಿನ್ನು ಹೆಚ್ಚುಕಾಲ ಬದುಕುವುದಿಲ್ಲವೆಂದು ತಿಳಿದಿದ್ದು, ತಮ್ಮ ಸೋದರ ಶಿಷ್ಯರಾದ ಸ್ವಾಮಿ ಬ್ರಹ್ಮಾನಂದಜಿ ಮುಂತಾದವರಿಗೆ ತಮ್ಮ ದೇಹಾವಸಾನದ ನಂತರ ತಾಯಿಗೆ ಸ್ವಲ್ಪವೂ ಕಷ್ಟವಾಗದಂತೆ ನೋಡಿಕೊಳ್ಳಲು ಹೇಳಿದರು.

ತಾಯಿಯ ಸಕಲ ಸಮಸ್ಯೆಗಳ ಪರಿಹಾರಕ್ಕಾಗಿ ಸಾಧ್ಯವಾದಷ್ಟು ಮಟ್ಟಿಗೆ ಪ್ರಯತ್ನಪಟ್ಟ ಸಂನ್ಯಾಸಿ ಜ್ಯೇಷ್ಠಪುತ್ರನ ಮೃತ್ಯುವಾರ್ತೆಯು ತಿಳಿದಾಗ, ಕಾರಣವನ್ನು ವಿಚಾರಿಸುತ್ತ ಶೋಕತಪ್ತರಾಗಿ ರೋದಿಸಿದರು ಮಾತೆ ಭುವನೇಶ್ವರಿ. ಬಳಿಕ ಮೊಮ್ಮಗನನ್ನು ಕರೆದುಕೊಂಡು ಬೇಲೂರು ಮಠಕ್ಕೆ ಬಂದರು. ಸ್ವಾಮೀಜಿಯ ಪಾರ್ಥಿವ ಶರೀರದ ಸುತ್ತಲೂ ಮಠದ ಸಾಧುಗಳೂ, ಸೋದರಿ ನಿವೇದಿತಾ ಸೇರಿದಂತೆ ಮಿತ್ರರೂ ನೆರೆದಿದ್ದರು. ಅಂತಿಮ ಶಯ್ಯೆಯಲ್ಲಿರಿಸಿದ್ದ, ಆಧ್ಯಾತ್ಮಿಕ ಜಗತ್ತಿನಲ್ಲಿ ದಿಗ್ವಿಜಯ ಸಾಧಿಸಿದ ಪುತ್ರನ ಶರೀರವನ್ನು ನೋಡಿದ ತಾಯಿಯ ಸಂಕಟವನ್ನು ಯಾರು ತಾನೆ ವರ್ಣಿಸಲು ಸಾಧ್ಯ? ಇಂಥ ಸಂದರ್ಭದಲ್ಲಿ ಸಂನ್ಯಾಸಿಗಳಿಗೆ, ಮಠಕ್ಕೆ ಅನ್ವಯವಾಗುವ ನಿಯಮಗಳನ್ನು ಅವರಿಗೆ ವಿವರಿಸಿ ಅವರನ್ನು ಮನೆಗೆ ಕಳುಹಿಸಿಕೊಡಲಾಯಿತು. ಅಂದಿನಿಂದ ಸ್ವಾಮಿ ಬ್ರಹ್ಮಾನಂದರು ಅವರ ಸ್ವಂತ ಮಗನ ಸ್ಥಾನದಲ್ಲಿ ನಿಂತರು. ತನ್ನ ಸರ್ವಸ್ವವೆನಿಸಿದ್ದ ಬಿಲೆಯನ್ನು ಕಳೆದುಕೊಂಡ ತಾಯಿಗೆ ಸಾಂತ್ವನ ನೀಡುವ ಪ್ರಧಾನ ಜವಾಬ್ದಾರಿ ಅವರ ಪಾಲಿನದಾಯಿತು. ಸಂನ್ಯಾಸಿ ವೃಂದದವರು ಭುವನೇಶ್ವರೀ ದೇವಿ ಹಾಗೂ ಆಕೆಯ ದುಃಖ-ಸಂಕಷ್ಟಗಳಲ್ಲಿ ಆಕೆಗೆ ಏಕೈಕ ಆಧಾರವಾಗಿದ್ದ ಆಕೆಯ ವೃದ್ಧ ತಾಯಿ ರಘುಮಣಿ ದೇವಿಯವರನ್ನು ಹೃತ್ಪೂರ್ವಕವಾಗಿ ನೋಡಿಕೊಂಡರು. ಆಗಾಗ ತೀರ್ಥಯಾತ್ರೆಗೆಂದು ಭುವನೇಶ್ವರೀ ದೇವಿಯವರನ್ನು ಕರೆದುಕೊಂಡು ಹೋಗುತ್ತಿದ್ದರು. ೧೯೧೧ರಲ್ಲಿ ಪುರಿಧಾಮದ ತೀರ್ಥಯಾತ್ರೆಯನ್ನು ಮುಗಿಸಿ ಬಂದ ಭುವನೇಶ್ವರಿದೇವಿ ತಮ್ಮ ತಾಯಿ ರಘುಮಣಿಯವರು ತೀರಿಕೊಳ್ಳುವ ಎರಡು ದಿನಗಳ ಮುಂಚಿತವಾಗಿ ಮೆದುಳಿನ ಉರಿಯೂತದಿಂದ ಸ್ವರ್ಗಸ್ಥರಾದರು.

ಮನೆಯೆಂಬ ಮೊದಲ ಪಾಠಶಾಲೆಯಲ್ಲಿ ತಾಯಿಯಿಂದ ಪಡೆದ ವಾತ್ಸಲ್ಯಭರಿತ ಶಿಕ್ಷಣದಿಂದಲೂ, ತಾವು ಆಕೆಗೆ ತೋರಿದ ಸಮ್ಮಾನ-ಗೌರವ, ಪ್ರೀತಿ-ಆದರ, ಶ್ರದ್ಧಾ-ಭಕ್ತಿಗಳಿಂದಲೂ ಸ್ವಾಮಿ ವಿವೇಕಾನಂದರು ಮಹಾತ್ಮರಾಗಲು ಸಾಧ್ಯವಾಯಿತು. ಈ ಅಸಾಮಾನ್ಯ ಗುಣಗಳಿಂದಲೇ ಅವರು ಬರಿಯ ಆಧ್ಯಾತ್ಮಿಕ ಪಿಪಾಸುಗಳ, ದೇಶಪ್ರೇಮಿಗಳ ಆದರ್ಶಮಾತ್ರವಾಗಿ ಉಳಿಯದೆ ಪ್ರಪಂಚದಾದ್ಯಂತವಿರುವ ಮಾತೆಯರು, ಮಕ್ಕಳು, ಭ್ರಾತೃ-ಭಗಿನಿಯರೆಲ್ಲರಿಂದಲೂ ವಂದಿತರಾಗಿದ್ದಾರೆ.

## ಸ್ವಾಮಿ ಬ್ರಹ್ಮಾನಂದರ ಭ್ರಾತೃ ಭಕ್ತಿ



ಬೇಲೂರು ಮಠದಲ್ಲಿ ಒಂದು ದಿನ ಮಧ್ಯಾಹ್ನ ಊಟವಾದ ಮೇಲೆ ಸ್ವಾಮಿ ವಿವೇಕಾನಂದರು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ, ಶಿಷ್ಯ ಶರತ್ ಚಕ್ರವರ್ತಿಯನ್ನು ಕರೆದು ಸ್ವಲ್ಪ ಕಾಲೊತ್ತುವಂತೆ ಹೇಳಿದರು. ಗುರುಸೇವೆಯ ಅವಕಾಶ ಸಿಕ್ಕಿದುದಕ್ಕೆ ಶರತ್‌ಗೆ ಸಂತೋಷವಾಯಿತು. ಆದರೆ ಸ್ವಾಮೀಜಿಗೆ ಶರತ್ ಕೊಲೊತ್ತಿದ್ದು ಹಿತವೆನಿಸಲಿಲ್ಲ; ಏಕೆಂದರೆ, ಪೂಜ್ಯಭಾವನೆಯಿಂದ ಅವನು ಮೆತ್ತಗೆ ಒತ್ತುತ್ತಿದ್ದ. ಸ್ವಾಮೀಜಿ ಅವನಿಗೆ ಆಗತಾನೆ ವಿಶ್ರಾಂತಿಗೆಂದು ತೆರಳಿದ್ದ ಬ್ರಹ್ಮಾನಂದರನ್ನು ಕರೆಯುವಂತೆ ಹೇಳಿದರು. ಬ್ರಹ್ಮಾನಂದರು ಬಂದೊಡನೆ ಸ್ವಾಮೀಜಿ, "ರಾಜಾ, ನನಗೆ ಈ ಹೊತ್ತು ಏಕೋ ಮೈ ಸರಿಯಿಲ್ಲ. ಪೂರ್ವಬಂಗಾಳದ ಇವನಿಗೆ ಕಾಲೊತ್ತುವಂತೆ ಹೇಳಿದೆ; ಆದರೆ ಅವನು ಚೆನ್ನಾಗಿ ಒತ್ತಲಿಲ್ಲ. ಆದಕ್ಕೇ ನಿನ್ನನ್ನು ಕರೆದೆ" ಎಂದರು. ತಕ್ಷಣ ಮಹಾರಾಜ್ ತಮ್ಮ ಬಲವನ್ನೆಲ್ಲ ಬಿಟ್ಟು ಪರಿಣತನಂತೆ ಸ್ವಾಮೀಜಿಗೆ ಮಾಲೀಷು ಮಾಡತೊಡಗಿದರು. ಹೀಗೆ ಎರಡು ಗಂಟೆ ಕಳೆಯಿತು. ಸುಸ್ತಾಗಿ ಬ್ರಹ್ಮಾನಂದರು ತಮ್ಮ ಕೊಠಡಿಗೆ ಹೋದ ನಂತರ, ಶರತ್ ಅವರ ಬಳಿಗೆ ಹೋಗಿ "ಮಹಾರಾಜ್, ನನ್ನ ಸಂದಿಗ್ಧತೆಯ ನಿವಾರಣೆಗಾಗಿ ಬಂದಿದ್ದೇನೆ. ನೀವು ಶ್ರೀರಾಮಕೃಷ್ಣರ ಅಧ್ಯಾತ್ಮಪುತ್ರರು ಎಂದು ಕೇಳಿರುವೆ. ಸ್ವಾಮೀಜಿ ನಿಮ್ಮನ್ನು ಅದೆಷ್ಟು ಗೌರವಿಸುವರು ಎಂಬುದೂ ಗೊತ್ತು. ಆದರೆ ಅವರು ನಿಮಗೆ ಕಾಲೊತ್ತುವಂತೆ ಹೇಳಿದ್ದೇಕೆ ಎಂಬುದು ಅರ್ಥವಾಗಲಿಲ್ಲ" ಎಂದು ನಿವೇದಿಸಿಕೊಂಡನು. ಬ್ರಹ್ಮಾನಂದರು, "ಏನು ಹೇಳುತ್ತಿರುವೆ? ಅವರು ಸಾಕ್ಷಾತ್ ಶಿವ ಎಂಬುದು ನಿನಗೆ ತಿಳಿಯದೆ? ಎಂದರು."